INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -4, November-December, 2022,
Page No,16- 26
Peer Reviewed Journal, Referred Journal

# ಚಂಗಾಳ್ವ ಅರಸರ ಆಡಳಿತ ಮಾಡಿರುವ ಪ್ರದೇಶದ ಭೌಗೋಳಿಕತೆಯ ಒಂದು ಸ್ಥೂಲನೋಟ

ರವಿ ಎಂ.ಕೆ.[1]

ಮೈಸೂರು ಹಾಗೂ ಕೊಡಗು ಜಿಲ್ಲೆಗಳ ಕೆಲವು ಪ್ರದೇಶವನ್ನು ಆಳಿದ ಚಂಗಾಳ್ವ ಅರಸರ ರಾಜ್ಯದ ಭೌಗೋಳಿಕ ಪ್ರದೇಶದ ನೆಲೆ ಮತ್ತು ಹಿನ್ನೆಲೆಯನ್ನು ಒಂದು ಬಾರಿ ಬಹುಸೂಕ್ಷ್ಮವಾಗಿಯೇ ಅವಲೋಕನವನ್ನು ಮಾಡಲಾಗಿದೆ. ಆವಾಗ ಪ್ರಸ್ತುತ ಮೈಸೂರು, ಕೊಡಗು ಮತ್ತು ಹಾಸನ ಜಿಲ್ಲೆ ಪ್ರದೇಶಗಳನ್ನು ಹೊಂದಿರುವುದು ಬಹುಮುಖ್ಯವಾಗಿಯೇ ಕಂಡುಬರುತ್ತದೆ. ಹಾಗಾಗಿಯೇ ಮೈಸೂರು ಜಿಲ್ಲೆಯ ಕೃಷ್ಣರಾಜನಗರ, ಹುಣಸೂರು ಮತ್ತು ಪಿರಿಯಾಪಟ್ಟಣ, ಕೊಡಗು ಜಿಲ್ಲೆಯ ಸೋಮವಾರಪೇಟೆ ಮತ್ತು ಹಾಸನ ಜಿಲ್ಲೆ ಅರಕಲಗೂಡು ತಾಲೋಕು ಪ್ರದೇಶಗಳು ಚಂಗಾಳ್ವ ಅರಸರ ಭೌಗೋಳಿಕ ಪ್ರದೇಶವೇ ಆಗಿತ್ತು. ಈ ಸಂಬಂಧವಾಗಿಯೇ ಸ್ಥಳೀಯ ಅಂಶಗಳು, ಶಾಸನಗಳು ಮತ್ತು ಸಾಹಿತ್ಯೀಕ ಆಧಾರಗಳ ಮೂಲಕ ದಾಖಲೀಸಲಾಗಿರುತ್ತದೆ.

ಮೈಸೂರು ಜಿಲ್ಲೆಯಲ್ಲಿನ ತಾಲ್ಲೂಕುಗಳಲ್ಲಿ ಕೃಷ್ಣರಾಜನಗರ ತಾಲ್ಲೂಕು ಕೂಡ ಒಂದಾಗಿರುತ್ತದೆ. ಈ ಕೃಷ್ಣರಾಜನಗರ ತಾಲ್ಲೂಕು ಕೇಂದ್ರವು ಮೈಸೂರು ಜಿಲ್ಲಾ ಕೇಂದ್ರದಿಂದ ಪಶ್ಚಿಮ ದಿಕ್ಕಿಗಿದ್ದು, ಸರಿಸುಮಾರು 41 ಕಿ.ಮೀ. ದೂರದಲ್ಲಿದೆ. ಈ ತಾಲ್ಲೂಕು ಸುಮಾರು 605 ಚದುರ ಕಿಲೋಮೀಟರ್ ಭೂ ವಿಸ್ತೀರ್ಣವನ್ನು ಹೊಂದುವ ಮೂಲಕ ಮೈಸೂರು ಜಿಲ್ಲೆಯಲ್ಲಿನ ತಾಲೋಕುಗಳಲ್ಲಿ 6 ಸ್ಥಾನವನ್ನು ಕೂಡ ಪಡೆದಿರುತ್ತದೆ. ಇದು 156 ಗ್ರಾಮಗಳನ್ನು ಮತ್ತು 4 ಹೋಬಳಿ ಕೇಂದ್ರಗಳನ್ನು ಒಳಗೊಂಡು ಕಾರ್ಯಪ್ರವೃತ್ತವಾಗಿರುತ್ತದೆ. ಈ ಕೃಷ್ಣರಾಜನಗರ ತಾಲ್ಲೂಕಿನ ಪೂರ್ವ ದಿಕ್ಕಿಗೆ ಮೈಸೂರು ಹಾಗೂ ಪಾಂಡವಪುರ ತಾಲ್ಲೂಕು, ಪಶ್ಚಿಮಕ್ಕೆ ಪಿರಿಯಾಪಟ್ಟಣ, ಉತ್ತರಕ್ಕೆ ಕೃಷ್ಣರಾಜಪೇಟೆ ಹಾಗೂ ದಕ್ಷಿಣಕ್ಕೆ ಹುಣಸೂರು ತಾಲ್ಲೂಕಿನ ಪರಿವ್ಯಾಪ್ತಿಯನ್ನು ಹೊಂದಿರುತ್ತದೆ.

ಕೃಷ್ಣರಾಜನಗರವು ಕಾವೇರಿ ನದಿಯಲ್ಲಿ ದಡದಲ್ಲಿರುವ ಒಂದು ಪ್ರದೇಶವೇ ಆಗಿದ್ದು, ಈ ನಗರವು ಬಹು ಹಿಂದೆ ಎಡತೊರೆ ಎಂದೂ ಕೂಡ ಕರೆಯಲ್ಪಟ್ಟಿರುತ್ತದೆ. ಇಲ್ಲಿನ ಕಾವೇರಿ ದಂಡೆಯ ಮೇಲೆ ಅರ್ಕೇಶ್ವರಸ್ವಾಮಿ ದೇವಾಲಯವಿದೆ. ಇದು ಜಗತ್ತಿನಲ್ಲಿಯೇ ಕಂಡುಬರುವಂತಹ ಎರಡನೇ ಸೂರ್ಯ ದೇವಾಲಯವೇ ಆಗಿರುತ್ತದೆ ಎಂದು ಗುರುತಿಸಬಹುದು. ಹಾಗೆಯೇ ಈ ದೇವಾಲಯದಲ್ಲಿರುವಂತಹ ಲಿಂಗದ ಮೇಲೆ ಶಿವರಾತ್ರಿಯಾದ ಅನಂತರ ದಿನದಲ್ಲಿ ಸೂರ್ಯನ ಕಿರಣಗಳು ನೇರವಾಗಿಯೇ

[1].ಸಂಶೋಧನಾ ವಿದ್ಯಾರ್ಥಿ,ಇತಿಹಾಸ ಅಧ್ಯಯನ ವಿಭಾಗ,ಮಂಗಳೂರು ವಿಶ್ವವಿದ್ಯಾನಿಲಯ,ಮಂಗಳ ಗಂಗೋತ್ರಿ.

ಬೀಳುತ್ತವೆ ಎಂದು ಹೇಳಬಹುದು. ನಗರವಾಗಿ ಸ್ಥಾಪಿತಗೊಂಡು ಕಾವೇರಿ ನದಿಯ ಪ್ರವಾಹದ ಹಾನಿಯ ಕಾರಣ ಮತ್ತು ಪರಿಣಾಮವಾಗಿಯೇ ಎಡತೊರೆಯು, ಉಗಮಗೊಂಡಿರುತ್ತದೆ. ಅನಂತರದಲ್ಲಿ ಕೃಷ್ಣರಾಜನಗರ ಎಂದಾಗಿರುತ್ತದೆ. ಇದಕ್ಕೆ ಮೈಸೂರು ರಾಜ ಸಂಸ್ಥಾನದಲ್ಲಿ ಹೆಚ್ಚು ಪ್ರಸಿದ್ಧಿ ಹಾಗೂ ಜನಪರವಾಗಿ ಅನೇಕ ಸಮಾಜ ಕಲ್ಯಾಣ ಕಾರ್ಯಗಳನ್ನು ಅಚ್ಚಳಿಯದೇ ಇರುವ ರೀತಿಯಲ್ಲಿ ಮಾಡಿರುವಂತಹ ರಾಜರ್ಷಿ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನೆನಪಿನ ನಾಮಾಂಕಿತವಾಗಿ ಈ ಪ್ರದೇಶಕ್ಕೆ ಕೃಷ್ಣರಾಜನಗರ ಎಂದು ನಾಮಕರಣ ಮಾಡಲಾಗಿರುತ್ತದೆ. ಹಾಗೆಯೇ ಭೌಗೋಳಿಕವಾಗಿ ಉತ್ತಮವಾದ ಫಲವತ್ತತೆ ಭೂಪ್ರದೇಶವನ್ನು ಕೂಡ ಹೊಂದುವ ಮೂಲಕ ಅಣೆಕಟ್ಟೆಯಿಂದ ನೀರಾವರಿ ಸೌಲಭ್ಯವನ್ನು ಹೊಂದಿರುವ ಒಂದು ತಾಲ್ಲೂಕು ಆಗಿರುತ್ತದೆ. ಇದರಿಂದಲೇ, ಸ್ವಾತಂತ್ರ್ಯ ಪೂರ್ವದಲ್ಲಿ ರಾಜಪ್ರಭುತ್ವವು ಆಕರ್ಷಣೀಯಗೊಳ್ಳಲೂ ಕೂಡ ಕಾರಣವೇ ಆಗಿರುತ್ತದೆ ಎಂದು ಹೇಳಬಹುದು.

ಭೌಗೋಳಿಕವಾಗಿ ಮೈಸೂರು ಜಿಲ್ಲೆಯ ಪಶ್ಚಿಮ ಭಾಗದಲ್ಲಿ, ಮಲೆನಾಡಿನ ಸೆರಗಿನಲ್ಲಿ ಕೊಡಗು ಜಿಲ್ಲೆಗೆ ಹೊಂದಿಕೊಂಡಂತಿರುವ ಹುಣಸೂರು ತಾಲ್ಲೂಕು, ಗಿರಿಪ್ರದೇಶಗಳಿಂದ ಕೂಡಿರುವ ವೈಶಿಷ್ಟ್ಯಪೂರ್ಣ ತಾಲೂಕಾಗಿದೆ. ಐತಿಹಾಸಿಕವಾಗಿ ಸರ್ದಾರ್ ಕೆ. ಬಸವರಾಜೇ ಅರಸು ಬಳಿಯಿದ್ದ ಕ್ರಿ.ಶ 1535ರ ತಾಮ್ರ ಶಾಸನದಲ್ಲಿ ಮೂರನೆಯ ಮಂಗರಸ ಕವಿಗೆ ಉಂಬಳಿ ನೀಡಿದ್ದ ಭೂಪ್ರದೇಶವನ್ನು ಗುರುತಿಸುವಲ್ಲಿ ಈಗಿನ ಹುಣಸೂರು ತಾಲೂಕು ವ್ಯಾಪ್ತಿಯಲ್ಲಿರುವ ಚಿಲುಕುಂದ (ಚಿಲ್ಕುಂದ), ಕಟ್ಟೆಮಳಲವಾಡಿ, ದೊಡ್ಡಹುಣಸೂರು, ಹನಗೋಡು, ಹೆಬ್ಬನಕುಪ್ಪೆ, ತಮ್ಮಡಿಹಳ್ಳಿಗಳ ಪ್ರಸ್ತಾಪವಿದೆ. 'ದೊಡ್ಡ ಹುಣಸೂರು' ಈಗ ತಾಲ್ಲೂಕು ಕೇಂದ್ರ ಹುಣಸೂರು ಪಟ್ಟಣವಾಗಿದ್ದು, ಪಟ್ಟಣದ ಒಂದು ಭಾಗವನ್ನು ಈಗಲೂ ಚಿಕ್ಕಹುಣಸೂರು ಎಂದೇ ಕರೆಯುತ್ತಾರೆ. ಕಾಡಿನಿಂದ ಸೌದೆಯನ್ನು ತಂದು ಮಾರಿ ಜೀವನ ಸಾಗಿಸುತ್ತಿದ್ದ ಪುಣಚಮಯ್ಯನಿಗೆ ಅಪಾರ ಐಶ್ವರ್ಯ ದೊರೆಯಿತೆಂದೂ ಆ ಹಣದಿಂದ ಲಕ್ಷ್ಮಣತೀರ್ಥ ನದಿ ದಡದಲ್ಲಿ ಊರೊಂದನ್ನು ನಿರ್ಮಿಸಿ ಆ ಊರಿಗೆ "ಪೊನ್ನಚ್ಚೂರು" ಎಂದು ಕರೆದನೆಂದೂ ಮುಂದೇ ಪೊನ್ನಚ್ಚೂರೇ ಹುಣಸೂರೆಂದಾಯಿತು ಎಂದು ಹೇಳಲಾಗುತ್ತದೆ. ಇದೇ ಅಲ್ಲದೇ ತನ್ನ ಗುರುಗಳಾದ ಕುಂದಾಚಾರ್ಯರ ಹೆಸರಿನಲ್ಲಿ ಶ್ರೀಕುಂದಾಚಾರ್ಯಪುರವನ್ನು ನಿರ್ಮಿಸಿದನೆಂದೂ ಮುಂದೆ ಅದೇ ಚಿಲ್ಕುಂದವೆಂದಾಯಿತೆಂದೂ ಹೇಳಲಾಗುತ್ತದೆ. ಹೊಯ್ಸಳರ ಪ್ರಖ್ಯಾತ ರಾಜನಾಗಿದ್ದ ವಿಷ್ಣುವರ್ಧನನ ದಂಡನಾಯಕ ಪುಣಸಮಯ್ಯನಿಂದ ಈ ಊರಿಗೆ ಆ ಹೆಸರು ಬಂದಿರುವ ಸಾಧ್ಯತೆಯನ್ನೂ ಪರಿಶೀಲಿಸುವ ಅಗತ್ಯವಿದೆ.

ಮೈಸೂರು ಜಿಲ್ಲೆಯ ಏಳು ತಾಲೂಕುಗಳಲ್ಲಿ ಒಂದಾದ ಹುಣಸೂರು ತಾಲೂಕಿಗೆ ಪೂರ್ವದಲ್ಲಿ ಮೈಸೂರು, ಆಗ್ನೇಯ ಮತ್ತು ದಕ್ಷಿಣದಲ್ಲಿ ಹೆಗ್ಗಡದೇವನಕೋಟೆ, ನೈಋತ್ಯದಲ್ಲಿ ಕೊಡಗು ಜಿಲ್ಲೆಯ ವೀರಾಜಪೇಟೆ, ಪಶ್ಚಿಮದಲ್ಲಿ ಪಿರಿಯಾಪಟ್ಟಣ ಹಾಗೂ ಉತ್ತರದಲ್ಲಿ ಕೃಷ್ಣರಾಜನಗರ ತಾಲೂಕುಗಳು

ಗಡಿಯಾಗಿವೆ ಎಂಬುದನ್ನು ಗುರುತಿಸಲಾಗಿದೆ. ಹುಣಸೂರು ತಾಲೂಕು ಪೂರ್ವ – ಪಶ್ಚಿಮವಾಗಿ 35 ಕಿಮೀ, ಉತ್ತರ – ದಕ್ಷಿಣವಾಗಿ 24 ಕಿಮೀ ವ್ಯಾಪಿಸಿದ್ದು, ಆಕಾರದಲ್ಲಿ ಉತ್ತರ – ದಕ್ಷಿಣವಾಗಿ ಕಿರಿದಾಗಿದ್ದರೆ, ಪೂರ್ವ – ಪಶ್ಚಿಮವಾಗಿ ಹಿರಿದಾಗಿದ್ದು, ಒಟ್ಟು 900 ಚ.ಕಿಮೀ ಭೂವಿಸ್ತೀರ್ಣವನ್ನು ಹೊಂದಿದೆ. ಮೈಸೂರು ಜಿಲ್ಲೆಯ ತಾಲೂಕುಗಳ ವಿಸ್ತೀರ್ಣದಲ್ಲಿ ಇದು ಮೂರನೆಯ ಸ್ಥಾನ ಪಡೆದಿದೆ. ತಾಲೂಕಿನಲ್ಲಿ ಕಸಬ, ಹನಗೋಡು, ಬಿಳಿಕೆರೆ ಮತ್ತು ಗಾವಡಗೆರೆ (ಗೌಡಗೆರೆ) ಎಂಬ ನಾಲ್ಕು ಹೋಬಳಿಗಳಿವೆ ಹಾಗೂ ಒಟ್ಟು 210 ಗ್ರಾಮಗಳಿವೆ.

ಹೊಯ್ಸಳರ ಆಡಳಿತದ ಕಾಲದಲ್ಲಿನ ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ ಲಕ್ಷ್ಮಣ ತೀರ್ಥವು ಒಂದು ತಾಲೂಕಿನ ಪ್ರಮುಖ ನದಿಯಾಗಿರುತ್ತದೆ. ದಕ್ಷಿಣ ಕೊಡಗು ಪ್ರದೇಶದ ಪಶ್ಚಿಮ ಘಟ್ಟ ಶ್ರೇಣಿಯ ಬ್ರಹ್ಮಗಿರಿಯ ದೇವಾಸಿಯಲ್ಲಿ ಹುಟ್ಟಿ ಈಶಾನ್ಯಾಭಿಮುಖವಾಗಿ ಹರಿದು ಹುಣಸೂರು ತಾಲೂಕಿನ ಕೋಣನ ಹೊಸಹಳ್ಳಿಯ ನೈಋತ್ಯದಲ್ಲಿ ಚಿಕ್ಕಹೆಜ್ಜೂರು ಬಳಿ ಮೈಸೂರು ಜಿಲ್ಲೆಯನ್ನು ಪ್ರವೇಶಿಸುತ್ತದೆ. ಇದು ಮುಂದೆ ತಾಲೂಕಿನ ದೊಡ್ಡಹೆಜ್ಜೂರು, ಹನಗೋಡು, ಹುಣಸೂರು, ಕಟ್ಟೆಮಳಲವಾಡಿ ಮತ್ತು ಸೋಮನಹಳ್ಳಿ ಮೂಲಕ 130 ಕಿಮೀ ದೂರ ಪ್ರವಹಿಸಿ, ಕೃಷ್ಣರಾಜನಗರ ತಾಲೂಕಿನ ಸಾಗರ ಕಟ್ಟೆಯ ಬಳಿ ಬಲಭಾಗದಿಂದ ಕಾವೇರಿ ನದಿಯನ್ನು ಕೂಡಿಕೊಳ್ಳುತ್ತದೆ. ಹನಗೋಡು, ರಾಮೇನಹಳ್ಳಿ, ಮರೆಹಳ್ಳಿ, ಕಟ್ಟೆಮಳಲವಾಡಿ, ಹಂಗರಹಳ್ಳಿ, ಸಾಗರಕಟ್ಟೆ ಮತ್ತು ಜೋಳನಹಳ್ಳಿ ಬಳಿ ಈ ನದಿಗೆ ಅಡ್ಡಗಟ್ಟೆಗಳನ್ನು ಕಟ್ಟಲಾಗಿದೆ. ದಿವಾನ್ ಪೂರ್ಣಯ್ಯ ಅವರ ಕಾಲದಲ್ಲಿ ಸಾಗರಕಟ್ಟೆ ಬಳಿ ಅಡ್ಡಗಟ್ಟೆಯನ್ನು ಕಟ್ಟಲಾಗಿತ್ತು. ಈ ಅಣೆಕಟ್ಟೆಗಳಿಂದ ಸುತ್ತಮುತ್ತಲ ತಾಲೂಕುಗಳ ಪ್ರದೇಶವೂ ಸೇರಿದಂತೆ ಸುಮಾರು 1690 ಚ.ಕಿ.ಮೀ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಿದಂತಾಗಿದೆ.

ಹುಣಸೂರು ತಾಲೋಕಿನ ಏಕೈಕ ನದಿಯಾದ ಲಕ್ಷ್ಮಣ ತೀರ್ಥವೂ ಕರ್ನಾಟಕದ ಜೀವ ಜಲಧಾರೆಯೇ ಆಗಿರುವಂತಹ ಕಾವೇರಿ ನದಿಯ ಒಂದು ಮುಖ್ಯ ಉಪನದಿ ಇದಾಗಿದೆ ಎಂದು ಹೇಳಬಹುದು. ಇದರ ಉಗಮಕ್ಕೂ ರಾಮಾಯಣಕ್ಕೂ ಇರುವ ಸಂಬಂಧವನ್ನು ಈಗಲೂ ಜನರ ಬಾಯಲ್ಲಿ ಕೇಳಬಹುದು. ವನವಾಸ ಕಾಲದಲ್ಲಿ ಶ್ರೀರಾಮ, ಸೀತೆ, ಲಕ್ಷ್ಮಣ ಈ ಭಾಗದಲ್ಲಿ ಸಂಚರಿಸುತ್ತಿರುವಾಗ ಸೀತೆಗೆ ದಾಹವಾಗಿ ಕುಡಿಯಲು ನೀರು ಕೇಳಿದಾಗ ಅಲ್ಲೆಲ್ಲೂ ನೀರು ಕಾಣಿಸದಿರಲು ಲಕ್ಷ್ಮಣನು ಬಾಣ ಪ್ರಯೋಗಿಸಿದಾಗ ಬಂಡೆಯೊಂದು ಸೀಳಿಕೊಂಡು ಅದರಿಂದ ನೀರು ಚಿಮ್ಮಲಾರಂಭಿಸಿತಂತೆ. ಲಕ್ಷ್ಮಣ ಹುಟ್ಟಿದ ಈ ನದಿ ಲಕ್ಷ್ಮಣ ತೀರ್ಥವೆಂದು ಹೆಸರಾಯಿತು. ಲಕ್ಷ್ಮಣ ತೀರ್ಥ ನದಿ ದಂಡೆಯಲ್ಲಿರುವ ಶಿವನ ಒಂದು ದೇವಾಲಯವನ್ನು ಶ್ರೀರಾಮನೇ ನಿರ್ಮಿಸಿದ್ದೆಂದೂ ಪ್ರತೀತಿ ಇದೆ. ಇಲ್ಲಿ ಪ್ರತಿವರ್ಷ ಮಹಾಶಿವರಾತ್ರಿಯ ದಿನದಂದು ದೊಡ್ಡ ಜಾತ್ರೆಯೂ ಕೂಡ

ನಡೆಯುತ್ತದೆ. ಹುಣಸೂರು ತಾಲೂಕಿನ ಜಲಾವಶ್ಯಕತೆಯನ್ನು ಅಲ್ಲಿನ ಅನೇಕ ಕೆರೆ ಮತ್ತು ಬಾವಿಗಳು ಸಹ ಪೂರೈಸುತ್ತಿವೆ.

ಭೌಗೋಳಿಕವಾಗಿಯೂ ಪಿರಿಯಾಪಟ್ಟಣ ತಾಲ್ಲೂಕು ಪ್ರದೇಶವು ಬೆಟ್ಟಗುಡ್ಡದಿಂದ ಕೂಡಿದ್ದು, ಕಲ್ಲು ಚಪ್ಪಡಿಗಳು ಹಾಗೂ ಗುಂಡುಕಲ್ಲುಗಳು ಬಹುದೊಡ್ಡ ಪ್ರಮಾಣದಲ್ಲಿ ಲಭ್ಯವಾಗಿರುವುದರಿಂದ ಅಲ್ಲಿ ಬೃಹತ್ ಶಿಲಾಗೋರಿಗಳ ನೆಲೆಗಳಿರುವುದು ಸಹಜವಾಗಿಯೇ ಕಂಡುಬಂದಿರುತ್ತದೆ. ಪಿರಿಯಾಪಟ್ಟಣ ತಾಲ್ಲೂಕಿನ ಅನೇಕ ಉತ್ಖನನಗಳಲ್ಲಿ ಹಾಗೂ ಪರಿವೀಕ್ಷಣೆಯಲ್ಲಿ ಈ ನೆಲದಲ್ಲಿನ ಶಿಲಾಗೋರಿ ಸಂಸ್ಕೃತಿಯ ಪ್ರಾದೇಶಿಕತೆಯನ್ನು ಪ್ರತಿಪಾದಿಸಿದಂತಹ ಹಲವು ಹತ್ತು ಅಲಂಕಾರಿಕಾ ಸಾಧನ ಮತ್ತು ಸಲಕರಣೆಗಳನ್ನು ಕೂಡ ಬಳಸುತ್ತಿದ್ದರು ಎಂಬುದು ಕಂಡುಬಂದಿರುತ್ತದೆ. ಸರಿಸುಮಾರು ಕ್ರಿ.ಪೂ. 600 ರಿಂದ ಕ್ರಿ.ಶ. ಒಂದನೇಯ ಶತಮಾನದಲ್ಲಿದ್ದ ಈ ಬೃಹತ್ ಶಿಲಾಯುಗದ ಸಂಸ್ಕೃತಿಯೂ ಪ್ರಸ್ತುತ ಪಡಿಸುವುದೇ ಈ ಅಧ್ಯಯನದಲ್ಲಿ ಮಹತ್ವದ ಉದ್ದೇಶವೇ ಆಗಿರುತ್ತದೆ. ಅನಂತರದ ಸಂಸ್ಕೃತಿಗೆ ಹೇಗೆ ಹೆಚ್ಚು ಭದ್ರಬುನಾದಿಯನ್ನು ತಿಳಿದುಕೊಳ್ಳಬೇಕಾಗಿದೆ.

ಕರ್ನಾಟಕ ರಾಜ್ಯದಲ್ಲಿನ ದಕ್ಷಿಣ ದಿಕ್ಕಿನಲ್ಲಿರುವ ಮೈಸೂರು ಜಿಲ್ಲೆಯ ಪರಿಮಿತಿಯಲ್ಲಿ ಬರುವಂತಹ ಏಳು ತಾಲ್ಲೂಕುಗಳಲ್ಲಿ ಪಿರಿಯಾಪಟ್ಟಣವೂ ಕೂಡ ಒಂದಾಗಿದೆ. ಈ ಪಿರಿಯಾಪಟ್ಟಣ ತಾಲ್ಲೂಕು ಮೈಸೂರು ಜಿಲ್ಲೆಯ ಪಶ್ವಿಮಕ್ಕೆ ಇದ್ದು, ಜಿಲ್ಲೆಯಲ್ಲಿ ಪಶ್ಚಿಮ ಹಾಗೂ ವಾಯುವ್ಯ ಗಡಿಯೂ ಆಗಿದ್ದು, ಕ್ರಿ.ಶ. 1869ರಲ್ಲಿ ತಾಲ್ಲೂಕಾಗಿ ಅಸ್ಥಿರಕ್ಕೆ ಬಂದರೂ ಹುಣಸೂರು ಇದರ ಕೇಂದ್ರ ಸ್ಥಾನವೇ ಆಗಿತ್ತು. ಇದು ಸರಿಸುಮಾರು ಕ್ರಿ.ಶ 1882ರಲ್ಲಿ ಹುಣಸೂರು ಒಂದು ತಾಲ್ಲೂಕು ಆದಾಗ ಅದರಲ್ಲಿ ಈ ತಾಲ್ಲೂಕು ವಿಲೀನವೇ ಆಗಿರುತ್ತದೆ. ಈ ಪಿರಿಯಾಪಟ್ಟಣವು ಸರಿಸುಮಾರು ಕ್ರಿ.ಶ 1935ರಲ್ಲಿ ಮತ್ತೇ ಒಂದು ಸ್ವತಂತ್ರ ಅಸ್ತಿತ್ವವ ಪಡೆದ ಈ ತಾಲ್ಲೂಕು ವಾಯುವ್ಯ ಭಾಗದಲ್ಲಿ ಗಡಿಯಾಗಿ ಕಾವೇರಿ ನದಿ ಸ್ವಲ್ಪ ದೂರದಲ್ಲಿ ಪ್ರವೇಶಿಸಿ ನೆರೆಯ ಹಾಸನ ಜಿಲ್ಲೆಯನ್ನು ಹೊಳೆನರಸೀಪುರ ತಾಲ್ಲೂಕಿನಲ್ಲಿ ಸಂಧಿಸುತ್ತವೆ.

ಪಿರಿಯಾಪಟ್ಟಣವು ಮೈಸೂರಿನಿಂದ ಪಶ್ಚಿಮ ದಿಕ್ಕಿಗೆ ಸರಿ ಸುಮಾರು 71 ಕಿಲೋಮೀಟರ್ ದೂರದಲ್ಲಿದೆ. ಈ ತಾಲ್ಲೂಕು ಸುಮಾರು 814 ಚ.ಕಿ.ಮೀ. ಭೂವಿಸ್ತೀರ್ಣವನ್ನು ಹೊಂದಿರುವ ಇದು ಜಿಲ್ಲೆಯಲ್ಲಿನ ತಾಲ್ಲೂಕುಗಳಲ್ಲಿ ಐದನೆಯ ಸ್ಥಾನವನ್ನು ಪಡೆದುಕೊಂಡಿದೆ. 197 ಗ್ರಾಮಗಳನ್ನು ಹಾಗೂ ಇದೇ ಜಿಲ್ಲೆಯಲ್ಲಿನ ನಾಲ್ಕು ಹೋಬಳಿ ಕೇಂದ್ರಗಳನ್ನು ಒಳಗೊಂಡಿದೆ. ಪಿರಿಯಾಪಟ್ಟಣ ತಾಲ್ಲೂಕಿನ ಪೂರ್ವ ದಿಕ್ಕಿಗೆ ಹುಣಸೂರು ತಾಲ್ಲೂಕು ಉತ್ತರಕ್ಕೆ ಹಾಸನ ಜಿಲ್ಲೆ, ಪಶ್ಚಿಮಕ್ಕೆ ಕೊಡಗು ಜಿಲ್ಲೆ, ವಿರಾಜಪೇಟೆ ಉತ್ತರಕ್ಕೆ ಸೋಮವಾರಪೇಟೆ ತಾಲ್ಲೂಕು, ದಕ್ಷಿಣಕ್ಕೆ ಹೆಗ್ಗಡದೇವನಕೋಟೆ ತಾಲ್ಲೂಕುಗಳನ್ನು ಸುತ್ತುವರೆದಿರುತ್ತದೆ ಎಂಬುದನ್ನು ಗುರುತಿಸಲಾಗಿದೆ. ಈ ಪಿರಿಯಾಪಟ್ಟಣ ತಾಲ್ಲೂಕು ಅರಣ್ಯ ಪ್ರದೇಶದಿಂದ ಆವೃತ್ತವಾಗಿರುವ ಅರೆಮಲೆನಾಡು ಪ್ರದೇಶವೇ ಆಗಿದೆ. ಹಾಗೆಯೇ ಇದು

ಭೌಗೋಳಿಕವಾಗಿ, ಚಾರಿತ್ರಿಕವಾಗಿ ಹಾಗೂ ಸಾಂಸ್ಕೃತಿಕವಾಗಿಯೂ ಕೂಡ ಸಮೃದ್ಧವಾಗಿರುವ ಭವ್ಯ ಪರಂಪರೆಯನ್ನು ಹೊಂದಿದೆ ಎಂದು ಹೇಳಬಹುದು.

ಪಿರಿಯಾಪಟ್ಟಣ ತಾಲ್ಲೂಕಿನ ಇತಿಹಾಸ ಕೇವಲ ಈ ತಾಲ್ಲೂಕಿಗೆ ಸೀಮಿತವಾಗಿರಲಿಲ್ಲ. ಇದು ಕೊಡಗು ಜಿಲ್ಲೆ, ಹಾಸನ ಜಿಲ್ಲೆ ಮತ್ತು ಮೈಸೂರು ಜಿಲ್ಲೆಯಲ್ಲಿನ ತಾಲ್ಲೂಕುಗಳ ಗಡಿಗಳನ್ನು ಹೊಂದಿರುವ ತಾಲ್ಲೂಕು ಇದಾಗಿದೆ. ಬಹುಮುಖ್ಯವಾಗಿಯೇ ಈ ಪಿರಿಯಾಪಟ್ಟಣವು ಬೆಟ್ಟದಪುರದ ಬೆಟ್ಟವನ್ನು ಮಾವುಕಲ್ಲಯ್ಯನ ಬೆಟ್ಟವನ್ನು, ಹೊನ್ನೂರಯ್ಯನ ಬೆಟ್ಟವನ್ನು ಹಾಗೂ ಅವರೆಕಾಲ ಬೆಟ್ಟಗಳಿಂದ ಕೂಡಿರುವ ಈ ಪ್ರದೇಶವು ಅರೆಮಲೆನಾಡು ಪ್ರದೇಶವಾಗಿಯೇ ಕಂಡುಬರುತ್ತದೆ. ಹಾಗೆಯೇ ಈ ಪ್ರದೇಶವನ್ನಾಳಿರುವ ರಾಜರು ಮತ್ತು ಅರಸರ ಆಯಾ ಕಾಲ ಸಂದರ್ಭದಲ್ಲಿನ ಕಲೆ ಮತ್ತು ವಾಸ್ತುಶಿಲ್ಪಗಳ ಅವಶೇಷಗಳು ತಾಲ್ಲೂಕಿನ ಪ್ರದೆಶದಲ್ಲಿ ಸಾಕಷ್ಟು ಲಭ್ಯವೇ ಆಗಿರುತ್ತವೆ.

ಪಿರಿಯಾಪಟ್ಟಣ ತಾಲ್ಲೂಕಿನ ಸರಿಸುಮಾರು ಒಟ್ಟು ಗ್ರಾಮಗಳ ಪೈಕಿ 60 ಗ್ರಾಮಗಳಲ್ಲಿ ಒಟ್ಟು 148 ಶಾಸನಗಳು ಎಫಿಗ್ರಾಫಿಯ ಕರ್ನಾಟಿಕ ಸಂಪುಟ – 4ರ ಮೂಲಕ ಅಧ್ಯಯನಕ್ಕೆ ಹೆಚ್ಚು ಸಹಾಯ ಮಾಹಿತಿಯನ್ನು ನೀಡಿರುತ್ತವೆ. ಮತ್ತೇ ಅವುಗಳನ್ನು ಸಂದರ್ಭೋಚಿತವಾಗಿ ದಾಖಲಿಸಲಾಗಿದೆ ಎಂದು ಹೇಳಬಹುದು. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಲಭ್ಯವಾಗಿರುವ ಶಾಸನಗಳು ಈ ಪ್ರದೇಶವನ್ನು ಆಳ್ವಿಕೆ ಮಾಡಿದ ಕದಂಬ, ಗಂಗ, ಚಾಲುಕ್ಯ, ಹೊಯ್ಸಳ, ವಿಜಯನಗರ, ಚಂಗಾಳ್ವ, ಮೈಸೂರು ಒಡೆಯರ್ ಅವರಿಗೆ ಸಂಬಂಧಿಸಿದಂತೆ ಮಹತ್ವದ ಮಾಹಿತಿಯನ್ನು ದಾಖಲಿಸುತ್ತವೆ. ಸ್ವಾಭಾವಿಕವಾಗಿಯೇ ಈ ಪ್ರದೇಶವನ್ನಾಳಿದ ಸಾಮಂತರು ಹಾಗೂ ಸ್ವತಂತ್ರರಾಗಿದ್ದಂತಹ ಚಂಗಾಳ್ವರಿಗೆ ಸಂಬಂಧಿಸಿದಂತೆ ಇರುವ ಶಾಸನಗಳು ಅಧಿಕವಾಗಿವೆ. ಪಿರಿಯಾಪಟ್ಟಣ ಎಂಬ ಸ್ಥಳನಾಮವೇ ಚಂಗಾಳ್ವ ದೊರೆಯ ಹೆಸರನ್ನು ಆಧರಿಸಿದ್ದು, ಈ ಶಾಸನಗಳನ್ನು ವಂಶವಾರು ದಾಖಲಿಸುವ ಮೂಲಕ ಗುರುತಿಸಲಾಗಿದೆ.

ಚಂಗಾಳ್ವ ಅರಸರು ಮೈಸೂರು ಮತ್ತು ಕೊಡಗು ಜಿಲ್ಲೆಗಳ ಸತ್ತಮುತ್ತಲಿನ ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ್ದಾರೆ ಎಂಬುದು ತಿಳಿದುಬರುತ್ತದೆ. ಚಂಗಾಳ್ವ ಅರಸರ ಚರಿತ್ರೆಯು ಸರಿಸುಮಾರು ಕ್ರಿ.ಶ. 10ನೇ ಶತಮಾನದಿಂದ 17ನೇ ಶತಮಾನದ ಮಧ್ಯ ಭಾಗದವರೆಗೆ ಎಂದು ಗುರುತಿಸಲಾಗಿದೆ. ಇದೇ ಚಂಗಾಳ್ವ ಅರಸರು ಇಷ್ಟು ದೀರ್ಘಕಾಲ ಅಳ್ವಿಕೆ ನಡೆಸಿದರೂ ಎಂಬುದನ್ನು ಕುರಿತಂತೆ ಯಾವುದೇ ಮಾದರಿಯ ಶಾಸನಗಳಿಂದಾಗಲಿ, ಸಮಕಾಲೀನ ಕೃತಿಗಳಿಂದಾಗಲಿ ಹೆಚ್ಚಿನ ಮಾಹಿತಿಗಳು ದೊರಕಿರುವುದಿಲ್ಲ. ಆದರೆ, ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರು ಹಾಗೂ ಜಾನಪದ ಖ್ಯಾತ ವಿದ್ವಾಂಸರಾದಂತಹ ಡಾ.ಪಿ.ಕೆ.ರಾಜಶೇಖರ್ ಅವರ ಅಭಿಪ್ರಾಯವೂ ಕೂಡ ಅಕ್ಷರಶಃ ಸತ್ಯವೇ ಆಗಿರುತ್ತದೆ. ಏಕೆಂದರೆ ಈ ಪ್ರದೇಶದಲ್ಲಿ ದೊರಕಿರುವ ಶಾಸನಗಳಲ್ಲಿ ಸರಿಸುಮಾರು ಶೇಕಡಾ 25ರಷ್ಟು ಶಾಸನಗಳು ಚಂಗಾಳ್ವ ಅರಸರದ್ದೇ ಆಗಿರುವ ಅಭಿಪ್ರಾಯವೂ ಕೂಡ ಪರಿಗಣಿಸುವ ವಿಚಾರವೇ ಆಗಿದೆ.

ವಿಜಯನಗರ ಅರಸರ ಆಡಳಿತದ ಕಾಲಕ್ಕೆ ಕೊಡಗು ಮತ್ತು ಮೈಸೂರು ಪ್ರದೇಶದಲ್ಲಿ ವಿಜಯನಗರದ ಅರಸ ಆಡಳಿತವನ್ನು ಗುರುತಿಸಬಹುದು. ಇವರ ಆಡಳಿತದ ಕಾಲಾವಧಿಯಲ್ಲಿ ಚಂಗಾಳ್ವರು ಮಾಂಡಲೀಕರಾಗಿ ಇವರ ಕೆಲವು ಪ್ರದೇಶವನ್ನು ಹಾಗೂ ಭಾಗವನ್ನು 15ನೇ ಶತಮಾನದಿಂದ ಮುಂದಕ್ಕೆ ಆಳುತ್ತಿದ್ದರು ಎಂಬುದನ್ನು ಗುರುತಿಸಲಾಗಿದೆ. ಈ ಚಂಗಾಳ್ವರು ಇವರ ಮಾಂಡಾಲೀಕರಾಗಿ ಆಡಳಿತವನ್ನು ನಡೆಸಿದರು ಎಂಬುದನ್ನು ಕೊಡಗಿನ ಪ್ರದೇಶದಲ್ಲಿನ ಮುಳ್ಳೂರು ಗ್ರಾಮದಲ್ಲಿ ಗುರುತಿಸಲಾಗಿರುವ ಕ್ರಿ.ಶ. 1390ರ ಶಾಸನ ಸಂಖ್ಯೆ – 75ರ ಪ್ರಕಾರ; ಆಡಳಿತವನ್ನು ನಡೆಸಿರುವುದು ಉಲ್ಲೇಖಿತಗೊಂಡಿದೆ. ಹಾಗೆಯೇ, ಸರಿಸುಮಾರು 16ನೇ ಶತಮಾನದ ಉತ್ತರಾರ್ಧದಲ್ಲಿ ಕೊಡಗಿನ ಒಡೆಯರು ದಕ್ಷಿಣ ಮತ್ತು ಪಶ್ಚಿಮ ಕೊಡಗಿನಲ್ಲೂ ಇದೇ ಚಂಗಾಳ್ವರು ನಂಜರಾಜ ಪಟ್ಟಣದಿಂದ ಕೊಡಗಿನ ಪೂರ್ವಸೀಮೆ ಹಾಗೂ ಮೈಸೂರು ಜಿಲ್ಲೆಯ ಭಾಗಗಳಲ್ಲಿಯೂ ಆಳುತ್ತಿದ್ದರು ಎಂದು ತಿಳಿಸುತ್ತದೆ. ಹೀಗೆ ಆಳುತ್ತಿದ್ದಂತಹ ಚಂಗಾಳ್ವರ ಪ್ರದೆಶದ ಮೇಲೆ ಯುದ್ಧ ಮಾಡಿದ ಮೈಸೂರಿನ ಅರಸರು ಪಿರಿಯಾಪಟ್ಟಣವನ್ನು ವಶಪಡಿಸಿಕೊಂಡು ಆ ಮೂಲಕ ನಾಮವಶೇಷ ಮಾಡಿ ಸ್ವಾಮಂತರಾಗಿ ಮಾಡಿಕೊಂಡರು ಎಂಬುದು ತಿಳಿದುಬರುತ್ತದೆ.

ಕೊಡಗಿನ ಒಡೆಯರೂ ಪಿರಿಯಾಪಟ್ಟಣ ಪ್ರದೇಶದಲ್ಲಿ ಮಾಂಡಲೀಕರಾಗಿದ್ದ ಚಂಗಾಳ್ವರೂ ಒಂದೇ ವಂಶದವರು ಎಂದೂ ಅಥವಾ ಅವರಿಬ್ಬರೂ ಪರಸ್ಪರ ಸಂಬಂಧಿಗಳೆಂದು ತಿಳಿದುಬರುತ್ತದೆ. ಚಂಗಾಳ್ವರು ಸರಿಸುಮಾರು ಪ್ರಾಚೀನ ವಂಶದವರಾಗಿದ್ದು, 16ನೇ ಶತಮಾನದಲ್ಲಿ ಇವರು ನಂಜರಾಜಪಟ್ಟಣದಿಂದ ಆಳಿಕೊಂಡಿದ್ದರು. ಹಾಗೆಯೇ ಕ್ರಿ.ಶ. 1590ರಲ್ಲಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣವನ್ನು ಸ್ಥಾಪಿಸಿದರು ಎಂಬುದನ್ನು ಪಿರಿಯಾಪಟ್ಟಣದ ಶಾಸನ ಸಂಖ್ಯೆ – 1ರಲ್ಲಿ ದಾಖಲೀಕರಿಸಿರುತ್ತದೆ. ಇದೇ ಸ್ಥಳದಲ್ಲಿ ಹೊಸ ಹೆಸರು ಕೊಟ್ಟ ಒಂದು ಕೋಟೆಯನ್ನು ಕೂಡ ಕಟ್ಟಿಸಿ ಅದನ್ನು ವಿಸ್ತರಿಸಿದ್ದನು. ಈತನ ಮುಂದೆ ಕ್ರಿ.ಶ. 1612ರ ಶಾಸನವೊಂದರಲ್ಲಿ ನಂಜರಾಜ ಪಟ್ಟಣದ ಅರಸು ಎಂದು ಸ್ವಯಂ ಆಗಿಯೇ ಕರೆದು ಕೊಂಡ್ಡಿದಾರೆ ಎಂದು ಉಲ್ಲೇಖಿತಗೊಂಡಿದೆ.

ಮೈಸೂರಿನ ಕಂಠೀರವ ನರಸರಾಜ ಹಾಗೂ ಕೊಡಗಿನ ಕೆಲವು ಪ್ರದೆಶ ಹಾಗೂ ಭಾಗಗಳನ್ನು ಗೆದ್ದು ವಶಪಡಿಸಿಕೊಂಡಾಗ ಅಂದರೆ, ಕ್ರಿ.ಶ. 1645ರಲ್ಲಿ ಈ ಪ್ರದೇಶದಲ್ಲಿನ ಚಂಗಾಳ್ವ ಅರಸರ ರಾಜನನ್ನು ಪಿರಿಯಾಪಟ್ಟಣದಲ್ಲಿ ಬಂಧಿಸಿ ಕಾವೇರಿಯ ಪುರ್ವ ದಿಕ್ಕಿನ ಪ್ರದೇಶವನ್ನು ವಶಪಡಿಸಿಕೊಂಡಿದ್ದನು. ಆಗ ಈ ಚಂಗಾಳ್ವರ ವಶದಲ್ಲಿದ್ದ ಪ್ರದೇಶವು ಕೊಡಗಿನ ವಶಕ್ಕೆ ಬಂದು ಅನಂತರ ಇದನ್ನು ಪಡೆಯಲು ಮೈಸೂರು ಅರಸರು ಒಂದು ವರ್ಷ ಮುತ್ತಿಗೆ ಹಾಕಿದರು ಎಂಬುದು ತಿಳಿದುಬರುತ್ತದೆ. ಈ ಪ್ರದೇಶದಲ್ಲಿ ಚಂಗಾಳ್ವರು ತಮ್ಮನ್ನು ತಾವು ಕಾಸ್ಯಪಗೋತ್ರದವರೆಂದು ಹೇಳಿಕೊಳ್ಳುತ್ತಿದ್ದರು. ಆದರೆ ಇವರು ಮೈಸೂರಿನ ಅರಸರಿಗೆ ಬೀಗರಾಗಿದ್ದರು ಎಂಬುದು ತಿಳಿದುಬರುತ್ತದೆ.

ಚಂಗಾಳ್ವ ಅರಸರು ತೀರ ಸಾಮಾನ್ಯ ಹಾಗೂ ನಗಣ್ಯ ಪಾಳೆಯಗಾರರೇ ಆಗಿದ್ದರು. ಆದ್ದರಿಂದಲೇ ಒಂದೇ ಮುದ್ದುರಾಜ ಇವರ ಆಳ್ವಿಕೆಯ ಮುಗಿದ ಅನಂತರ ಹಾಲೇರಿ ಹಾಗೂ ಹೆಚ್ಚಿನ ಪ್ರದೇಶವನ್ನು ಕೈವಶ ಮಾಡಿಕೊಂಡನು. ಹಾಗೆಯೇ ಕ್ರಿ.ಶ. 1568ರ ಸಂನ್ಯಾಸಿಪುರದಲ್ಲಿನ ತಾಮ್ರಶಾಸನ ಒಂದರ ಪ್ರಕಾರ ನಂಜರಾಜಪಟ್ಟಣವು ಇದೇ ಚಂಗಾಳ್ವರ ರಾಜಧಾನಿಯಾಗಿದ್ದು ಎಂದು ಉಲ್ಲೇಖಿಸಿರುತ್ತದೆ. ಕೊಡಗಿನಲ್ಲಿ ಚಂಗಾಳ್ವರು ಕ್ರಿ.ಶ.1645ರಲ್ಲಿ ಪತನವಾದ ಅನಂತರ ಉತ್ತರ ಮತ್ತು ಪೂರ್ವ ಕೊಡಗಿನ ಪ್ರದೇಶವನ್ನು ಇದೇ ಮುದ್ದುರಾಜನು ವಶಪಡಿಸಿಕೊಂಡು ಆಳ್ವಿಕೆಯನ್ನು ನಡೆಸಿದನು ಎಂಬುದು ತಿಳಿದುಬರುತ್ತದೆ.

ತಮಿಳುನಾಡು ಮೂಲದ ಚೋಳರು ತಲಕಾಡಿನ ಗಂಗ ವಂಶದ ರಾಜರನ್ನು ಸೋಲಿಸಿ ಕೊಡಗು ಹಾಗೂ ಮೈಸೂರಿನ ಅನೇಕ ಪ್ರದೇಶವನ್ನು ವಶಪಡಿಸಿಕೊಂಡಿದ್ದರು. ಆವಾಗ ಈ ಪ್ರದೇಶದಲ್ಲಿ ಚಂಗಾಳ್ವ ಅರಸರು ಅದೇ ಚೋಳ ರಾಜರ ಪ್ರತಿನಿಧಿಗಳಾಗಿ ಹಾಗೂ ಅವರ ಸಾಮಂತರಾಗಿಯೂ ಆಳಿರುವುದನ್ನು ಅಧ್ಯಯನದಲ್ಲಿ ದೊರಕಿರುವ ಶಾಸನ ಮತ್ತು ಸಾಹಿತ್ಯಿಕ ಆಧಾರಗಳ ಮೂಲಕ ಗುರುತಿಸಲಾಗಿದೆ. ಗಂಗ ವಂಶಸ್ಥರ ರಾಜಧಾನಿ ಆಗಿದ್ದಂತಹ ಗಂಗವಾಡಿಯನ್ನು ಚೋಳರು ಆಕ್ರಮಣ ಮಾಡಿ ಗೆದ್ದರು. ಇದೇ ಗಂಗವಾಡಿಯ ಪಶ್ಚಿಮದಲ್ಲಿ ಚಂಗಾಳ್ವ ಅರಸರನ್ನು ಈ ಚೋಳರು ತಮ್ಮ ಮಾಂಡಾಲೀಕರಾಗಿಯೂ ಕೂಡ ಮಾಡಿಕೊಂಡಿದ್ದರು ಎಂಬುದು ಕಂಡುಬರುತ್ತದೆ. ಚಂಗಾಳ್ವ ಅರಸರ ರಾಜ್ಯವೇ ಆಗಿರುವ ಕೊಡಗಿನಲ್ಲಿ ಶಾಸನ ಸಂಖ್ಯೆ – 48, 49, 53, 65, 67, 70, 72, 73, 81 ಹಾಗೂ 87 ಲಭ್ಯವಾಗಿರುವ 12 ಶಾಸನಗಳೇ ಆಗಿರುತ್ತವೆ. ಚೋಳ ರಾಜರುಗಳು ಸರಿಸುಮಾರು ಕ್ರಿ.ಶ. 985 ರಿಂದ 1064ರವರೆಗೆ ಇದೇ ಚಂಗಾಳ್ವ ಅರಸರನ್ನು ತಮ್ಮ ಸಾಮಂತರನ್ನಾಗಿ ಮಾಡಿಕೊಳ್ಳುವ ಮೂಲಕವೇ ಕೊಡಗಿನಲ್ಲಿ ಅವರು ತಮ್ಮ ಪ್ರಭುತ್ವ ಮತ್ತು ಅಧಿಕಾರವನ್ನು ಹೊಂದಿರುವುದು ಎಂದು ಹೇಳಬಹುದು.

ಒಟ್ಟಾರೆಯಾಗಿ, ಚಂಗಾಳ್ವ ಅರಸರು ಕೊಡಗು ಮತ್ತು ಮೈಸೂರು ಜಿಲ್ಲೆಯ ಕೆಲವು ಪ್ರದೇಶಗಳನ್ನು ಗಂಗರು, ಕದಂಬರು, ಚೋಳರು, ಚಾಲುಕ್ಯರು, ಕೊಡಗಿನ ಅರಸರು, ಮೈಸೂರು ಒಡೆಯರು, ವಿಜಯನಗರದ ಅರಸರು.ಕೊಡಗು ಪ್ರದೇಶವು ಪ್ರಧಾನವಾಗಿ ಪಶ್ಚಿಮ ಘಟ್ಟದ ತಪ್ಪಲಿನ ದಟ್ಟವಾದ ಕಾಡುಗಳಿಂದ ವೈಭವೀಕರಿಸಿದ ಕರ್ನಾಟಕದ ಅತ್ಯಂತ ಸುಂದರ ಗಿರಿಧಾಮವಾಗಿದೆ. ಇದು ನೈಋತ್ಯ ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿ 4,102 ಚದರ ಕಿಲೋಮೀಟರ್ – 1,584 ಚದರ ಮೈಲಿಯ ಪ್ರದೇಶವನ್ನು ಆವರಿಸಿದೆ. ಕೊಡಗು ಪಶ್ಚಿಮ ಘಟ್ಟಗಳ ಪೂರ್ವ ಇಳಿಜಾರುನಲ್ಲಿ ಇದೆ. ಜಿಲ್ಲೆಯು ವಾಯುವ್ಯಕ್ಕೆ ದಕ್ಷಿಣ ಕನ್ನಡ ಜಿಲ್ಲೆ, ಉತ್ತರಕ್ಕೆ ಹಾಸನ ಜಿಲ್ಲೆ, ಪೂರ್ವಕ್ಕೆ ಮೈಸೂರು ಜಿಲ್ಲೆ, ನೈರುತ್ಯಕ್ಕೆ ಕೇರಳದ ಕಣ್ಣೂರು ಜಿಲ್ಲೆ ಮತ್ತು ದಕ್ಷಿಣಕ್ಕೆ ಕೇರಳದ ವಯನಾಡ್ ಜಿಲ್ಲೆಗಳೊದಿಂಗೆ ಗಡಿ ಹೊಂದಿದೆ. ಇದು ಸಮುದ್ರ ಮಟ್ಟಕ್ಕಿಂತ 900 ಮೀಟರ್ ಅಂದರೆ, ಸರಿಸುಮಾರು 3,000 ಅಡಿಯ ಎತ್ತರದಲ್ಲಿದೆ.

ಕೊಡಗು ಜಿಲ್ಲೆಯ ಮುಖ್ಯ ನದಿ ಕಾವೇರಿಯಾಗಿದ್ದು, ಇದು ಪಶ್ಚಿಮ ಘಟ್ಟಗಳ ಪೂರ್ವ ಭಾಗದಲ್ಲಿರುವ ತಲಾ ಕಾವೇರಿಯಲ್ಲಿ ಹುಟ್ಟಿ ಅದರ ಉಪನದಿಗಳೊಂದಿಗೆ ಜಿಲ್ಲೆಯ ಅಧಿಕ ಭಾಗವನ್ನು ಆವರಿಸಿದೆ. ಸೋಮವಾರಪೇಟೆ ತಾಲೋಕು ಪ್ರದೇಶವೂ ಕೂಡ ಭಾರತ ದೇಶದಲ್ಲಿ ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲಿ ಒಂದಾಗಿರುವಂತಹ ಕೊಡಗು ಜಿಲ್ಲೆಯ ಒಂದು ತಾಲೋಕಾಗಿದೆ ಎಂದು ಹೇಳಬಹುದು. ಇದು ಕೊಡಗು ಜಿಲ್ಲೆಯ ಈಶಾನ್ಯದಲ್ಲಿರುವ ಭಾಗದಲ್ಲಿದ್ದು, ಎತ್ತರದ ದೃಷ್ಟಿಯಿಂದ ಕರ್ನಾಟಕದ 2ನೇ ಅತಿ ಎತ್ತರದ ಆಡಳಿತದ ದೃಷ್ಟಿಯಿಂದಲೂ ಕೂಡ ಇದು ಒಂದು ಪಟ್ಟಣವಾಗಿರುತ್ತದೆ.

ಮಲ್ಲಳ್ಳಿ ಜಲಪಾತವು ಮಲ್ಲಳ್ಳಿ ಅಬ್ಬಿ ಅಥವಾ ಕುಮಾರಧಾರಾ ಜಲಪಾತವು ಕೂರ್ಗ್‌ನಲ್ಲಿರುವ ಅತಿ ಎತ್ತರದ ಜಲಪಾತಗಳಲ್ಲಿ ಒಂದಾಗಿದೆ. ಇಲ್ಲಿ ಕುಮಾರಧಾರಾ ನದಿಯು 200 ಅಡಿ ಕೆಳಗೆ ಇಳಿಯುತ್ತದೆ. ಸೋಮವಾರಪೇಟೆಯಿಂದ 25 ಕಿಮೀ ದೂರದಲ್ಲಿರುವ ಪುಷ್ಪಗಿರಿ ಬೆಟ್ಟ ಮತ್ತು ಶ್ರೇಣಿಗಳ ತಪ್ಪಲಿನಲ್ಲಿ ನೆಲೆಗೊಂಡಿರುವ ಇತರ ಮಂಜಿನ ಜಲಪಾತಗಳು ಹೊಳೆಯ ಉದ್ದಕ್ಕೂ ಹರಡಿಕೊಂಡಿವೆ. ಮಥನಹೈಲ್, ಸೋಮವಾರಪೇಟೆ, ನೈರ್ಮಲ್ಯ ರಸ್ತೆಯಲ್ಲಿರುವ "ಬ್ಯೂಟಿ ಸ್ಪಾಟ್". "ಮೌಂಟೇನ್ ಮಿಸ್ಟ್ ಕಾಫಿ ವ್ಯಾಲಿ" ಪ್ರಮುಖವಾಗಿರುತ್ತವೆ ಎಂದು ಹೇಳಬಹುದು. ಇದೇ ಸೋಮವಾರಪೇಟೆಯ ತಾಲ್ಲೂಕಿನ ಇತರ ಆಕರ್ಷಣೆಗಳು ಎಂದರೆ; ಕುಶಾಲನಗರ, ಒಂದು ಜನಪ್ರಿಯ ಪ್ರವಾಸಿ ತಾಣವಾಗಿದೆ. ದಕ್ಷಿಣದಲ್ಲಿ, ಮೈಸೂರು ಮತ್ತು ಮಡಿಕೇರಿ ರಸ್ತೆಯ ಉದ್ದಕ್ಕೂ ಇದೆ. ಬೈಲಕುಪ್ಪೆ ಟಿಬೆಟಿಯನ್ ವಸಾಹತು ಈ ಪಟ್ಟಣದ ಸಮೀಪದಲ್ಲಿದೆ. ಹಾರಂಗಿ ಜಲಾಶಯ, ಕಣಿವೆ ನೇತಾಡುವ ವಧು ಮತ್ತು ಕೂಡಿಗೆ, ಕಾವೇರಿ ನಿಸರ್ಗಧಾಮ, ದುಬಾರೆ ಆನೆ ಶಿಬಿರ, ಚಿಕ್ಲಿಹೊಳೆ ಜಲಾಶಯ, ನಾಗರಹೊಳೆ ರಾಷ್ಟ್ರೀಯ ಉದ್ಯಾನವನಗಳು ಪ್ರಧಾನವಾಗಿರುವುದನ್ನು ಗುರುತಿಸಲಾಗಿದೆ. ಸೋಮವಾರಪೇಟೆಯಿಂದ ಸುಮಾರು 18 ಕಿ.ಮೀ ದೂರದಲ್ಲಿರುವ ಮಲ್ಲಳ್ಳಿಯ ಬಳಿ ಮಲ್ಲಳ್ಳಿ ಜಲಪಾತವಿದೆ. ಇದರೊಟ್ಟಿಗೆ ಕುಮಾರ ಪರ್ವತ ಚಾರಣವಿದೆ.

ಅರಕಲಗೂಡು ಹಾಸನ ಜಿಲ್ಲೆಯ ತಾಲೋಕುಗಳಲ್ಲಿ ಒಂದು ತಾಲೂಕು ಪ್ರದೇಶವೇ ಆಗಿರುತ್ತದೆ. ಇದು ಹಾಸನ ತಾಲೋಕು, ಆಲೂರು ತಾಲೋಕು ಹಾಗೂ ಹೊಳೇನರಸೀಪುರ ತಾಲ್ಲೋಕುಗಳನ್ನು ಮತ್ತು ಹತ್ತಿರದ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೋಕನ್ನು ಹಾಗೂ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೋಕುಗಳಿಂದ ಸುತ್ತುವರೆದಿದೆ. ಈ ಅರಕಲಗೂಡು ಪ್ರದೇಶವು ಅರೆಮಲೆನಾಡು ಪ್ರದೇಶವಾಗಿರುತ್ತದೆ. ಇದು ಹೆಸರಾಂತಹ ಸಾಹಿತಿಯಾಗಿರುವ ಅ.ನ.ಕೃ. ಅವರು ಹುಟ್ಟಿದ ಸ್ಥಳವಾಗಿದೆ. ಹಾಗೆಯೇ, ಕಾವೇರಿ ತೀರದಲ್ಲಿರುವ ರಾಮನಾಥಪುರದ ಸುಬ್ರಮಣ್ಯ ದೇವಸ್ಥಾನವು ಹೆಚ್ಚು ಪ್ರಸಿದ್ಧ ದೇವಸ್ಥಾನಗಳಲ್ಲಿ ಒಂದಾಗಿದೆ. ಈ ಪ್ರದೇಶದಲ್ಲಿ ಭತ್ತ, ತೆಂಗು, ಅಡಿಕೆ, ತಂಬಾಕು, ಆಲೂಗಡ್ಡೆ ಪ್ರಮುಖ ಬೆಳೆಗಳೇ ಆಗಿರುತ್ತವೆ. ಮುಂದುವರೆಯದ ಮತ್ತು ಹಿಂದುಳಿಯದ ಪ್ರದೇಶ ಇದಾಗಿದೆ ಎನ್ನಬಹುದು. ಈ

ಪ್ರದೇಶಕ್ಕೆ ಅರಕಲಗೂಡು ಎಂಬಂತಹ ಈ ಹೆಸರು ಬರಲು ಗೌತಮ ಮಹಾರ್ಷಿ ಕಾರಣ ಎಂದು ಹೇಳಲಾಗುತ್ತದೆ. ಏಕೆಂದರೆ, ಈ ಹಿಂದೆ ಗೌತಮ ಋಷಿಯು ಸೂರ್ಯ ದೇವರನ್ನು ಪೂಜಿಸಲು ಅರ್ಕೇಶ್ವರ ಪ್ರತಿಮೆಯನ್ನು ಈ ಊರಿನಲ್ಲಿ ಸ್ಥಾಪಿಸಿದ್ದರು. ಇದರ ನಿಜವಾದ ಹೆಸರು ಅರ್ಕಪುರಿ ಎಂದಿತ್ತು. ಅನಂತರ ಇದು ಅರಕಲಗೂಡು ಎಂದು ಬದಲಾಗಿದೆ ಎನ್ನಲಾಗುತ್ತದೆ. ಅರಕಲಗೂಡನ್ನು ಐಗೂರಿನ ಪಾಳೆಯಗಾರ ಕೃಷ್ಣಪ್ಪ ನಾಯಕನು ಕ್ರಿ.ಶ. 1268ರಲ್ಲಿ ಬೆಳಕಿಗೆ ತಂದನು ಎಂಬುದು ಚರಿತ್ರೆಯಲ್ಲಿ ದಾಖಲಾಗಿದೆ. ಅರಕಲಗೂಡು ತಾಲೂಕು ಪ್ರದೇಶದಲ್ಲಿನ ರಾಮನಾಥಪುರವು ಸುಬ್ರಹ್ಮಣ್ಯ ಸ್ವಾಮಿಯ ಹಾಗೂ ಹೊಯ್ಸಳರ ಕಾಲದ ರಾಮೇಶ್ವರ ದೇವಸ್ಥಾನ ಹೊಂದಿದ್ದು, ಇದು ದಕ್ಷಿಣ ಕಾಶಿ ಎಂದೂ ಕೂಡ ಹೆಚ್ಚು ಪ್ರಸಿದ್ಧವಾಗಿದೆ.

ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನಲ್ಲಿ ದೊಡ್ಡಮ್ಮತಾಯಿಯ ದೇವಾಲಯವಿದೆ. ಅರಕಲಗೂಡಿಗೆ ಹೊಂದಿಕೊಂಡಂತೆಯೆ ಇರುವ ಗೊರೂರಿನಲ್ಲಿ ಹೇಮಾವತಿ ನದಿಗೆ ಅಣೆಕಟ್ಟು ನಿರ್ಮಿಸಲಾಗಿದ್ದು ನೀರಾವರಿಗೆ ಇಂಬು ನೀಡಲಾಗಿದೆ. ಕೊಣನೂರಿನಲ್ಲಿರುವ ತೂಗು ಸೇತುವೆ ಹಾಸನ ಜಿಲ್ಲೆಯ ರಾಮನಾಥಪುರದಿಂದ ಐದು ಕಿ.ಮೀ ದೂರದಲ್ಲಿದೆ. ಕೊಣನೂರಿನಿಂದ ಕಟ್ಟೇಪುರ ಗ್ರಾಮಕ್ಕೆ ಜನರು ಸುಲಭವಾಗಿ ಸಂಚರಿಸಲು ಅನುಕೂಲವಾಗುವಂತೆ ಕಾವೇರಿ ನದಿಗೆ ಅಡ್ಡಲಾಗಿ ಇದನ್ನು ಸ್ಥಾಪಿಸಲಾಗಿದೆ. ಇದಲ್ಲದೆ ಐತಿಹಾಸಿಕ ಪ್ರಾಮುಖ್ಯತೆಯ ಅನೇಕ ದೇವಾಲಯಗಳು ಗ್ರಾಮದಲ್ಲಿವೆ ಎಂಬುದನ್ನು ಅನೇಕ ಪುರಾತತ್ವಶಾಸ್ತ್ರಜ್ಞರು ಮತ್ತು ಅಧ್ಯಯನಕಾರರು ಗುರುತಿಸಿರುವುದು ಕಂಡುಬರುತ್ತದೆ.

ಅರಕಲಗೂಡು ತಾಲೋಕು ಭಾರತ ದೇಶದಲ್ಲಿನ ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯ ಎಂಟು ತಾಲ್ಲೂಕುಗಳಲ್ಲಿ ಒಂದಾಗಿದೆ. ಹೇಮಾವತಿ ನದಿಯು ತಾಲ್ಲೂಕಿನ ಸಂಪೂರ್ಣ ಉತ್ತರದ ಗಡಿಯನ್ನು ರೂಪಿಸುತ್ತದೆ. ಕಾವೇರಿ ನದಿಯು ದಕ್ಷಿಣದ ಒಂದು ಭಾಗದಲ್ಲಿ ಹರಿಯುತ್ತದೆ. ಚಾರಿತ್ರಿಕವಾಗಿ ಗುರುತಿಸಿರುವಂತಹ ಮಹರ್ಷಿಗಳಲ್ಲಿ ಈ ಗೌತಮ ಮಹರ್ಷಿಗಳು ಒಬ್ಬರು. ಈ ಗೌತಮ ಋಷಿಗಳು ಸೂರ್ಯನನ್ನು ಕುರಿತಂತೆ ಒಂದು ಕಾಲದಲ್ಲಿ ತಪಸ್ಸು ಮಾಡಿದರು. ಹಾಗೆಯೇ ಈ ಸ್ಥಳದಲ್ಲಿ ಸ್ಥಳೀಯವಾಗಿಯೇ ಒಂದು ಅರ್ಕೇಶ್ವರ ದೇವಸ್ಥಾನದ ಪ್ರಧಾನ ದೇವತೆಯಾದ ಅರ್ಕೇಶ್ವರನ ವಿಗ್ರಹವನ್ನು ಸ್ಥಾಪಿಸಿದರು. ಮತ್ತೇ, ಇದೇ ಪಟ್ಟಣವನ್ನು ಮೂಲತಃ ಅರ್ಕಪುರಿ ಎಂದು ಕೂಡ ಕರೆಯಲಾಗುತ್ತಿತ್ತು. ಆದ್ದರಿಂದಲೇ, ಅರಕಲಗೂಡು ಎಂಬ ಹೆಸರು ಅಸ್ತಿತ್ವಕ್ಕೆ ಬಂದಿತು ಎಂಬಂತಹ ಒಂದು ಚಾರಿತ್ರಿಕ ಐತಿತ್ಯವೂ ಕೂಡ ಇದೆ. ಇದನ್ನು ಕ್ರಿ.ಶ. 1568ರಲ್ಲಿ ಐಗೂರು (ಬಲಂ) ಮುಖ್ಯಸ್ಥರಲ್ಲಿ ಒಬ್ಬರಾದ ಕೃಷ್ಣಪ್ಪ ನಾಯಕ ಅವರು ಸ್ಥಾಪಿಸಿದರು. ಅನಂತರ ಇದನ್ನು ಕ್ರಿ.ಶ 1647ರಲ್ಲಿ ಮೈಸೂರಿನ ಒಂದನೇಯ ಕಂಠೀರವ ನರಸರಾಜ ಅರಸರು ವಶಪಡಿಸಿಕೊಂಡರು. ಅನಂತರ ಇದನ್ನು ಇಕ್ಕೇರಿಯ ಕೆಳದಿ ಶಿವಪ್ಪ ನಾಯಕ ಮತ್ತು ಅಂತಿಮವಾಗಿ ಕ್ರಿ.ಶ 1694ರಲ್ಲಿ ಚಿಕ್ಕದೇವರಾಜ ವೊಡೆ ಅವರು ವಶಪಡಿಸಿಕೊಂಡರು

ಎಂದೇ ಹೇಳಹುದು. ಅರಕಲಗೂಡು ತಾಲೋಕು ಭಾಗಶಃ ಅರೆ–ಮಲೆನಾಡಿನಲ್ಲಿ ಮತ್ತು ಭಾಗಶಃ ಮೈದಾನದಲ್ಲಿ ನೆಲೆಸಿದೆ. ತಾಲೂಕಿನ ಒಟ್ಟು ಭೌಗೋಳಿಕ ವಿಸ್ತೀರ್ಣ 675 ಕಿಮೀ 2 – 261 ಚದರ ಮೈಲಿ ಇದು ಭೌಗೋಳಿಕ ಪ್ರದೇಶದ ದೃಷ್ಟಿಯಿಂದ ಜಿಲ್ಲೆಯಲ್ಲಿ ಆರನೇ ಸ್ಥಾನವನ್ನು ಪಡೆದುಕೊಂಡಿದೆ.

ಚನ್ನರಾಯಪಟ್ಟಣ ತಾಲೋಕು ಹಾಸನ ಜಿಲ್ಲೆಯ ತಾಲೋಕು ಪ್ರದೇಶಗಳಲ್ಲಿ ಒಂದು ತಾಲೂಕು ಕೇಂದ್ರವಾಗಿದೆ. ಇದು ಕರ್ನಾಟಕ ರಾಜ್ಯದ ರಾಜಧಾನಿಯೇ ಆಗಿರುವಂತಹ ಬೆಂಗಳೂರಿನಿಂದ 147 ಕಿ.ಮೀ ದೂರದಲ್ಲಿದೆ. ಇದಕ್ಕೆ ಕೊಳತ್ತೂರು/ಅಮೃತಪುರ ಎಂಬ ಹೆಸರುಗಳಿವೆ. ಈ ನಗರದ ಹೆಸರು ಚೆನ್ನಿಗರಾಯಪಟ್ಟಣ – ನಗರವನ್ನು ಆಳುತಿದ್ದ ರಾಜನ ಹೆಸರಿನಿಂದ ಬಂದಿರುತ್ತದೆ ಎಂದು ಹೇಳಬಹುದು. ಈ ಚನ್ನರಾಯಪಟ್ಟಣ ತಾಲೋಕು ಆರು ಹೋಬಳಿಗಳನ್ನು ಹೊಂದಿದ್ದು; ಅವುಗಳೆಂದರೆ; 1. ನುಗ್ಗೇಹಳ್ಳಿ 2. ಹಿರಿಸಾವೆ 3. ಬಾಗೂರು 4. ಶ್ರವಣಬೆಳಗೊಳ, 5. ದಂಡಿಗನಹಳ್ಳಿ ಮತ್ತು 6. ಕಸಬಾ ಈ ಚನ್ನರಾಯಪಟ್ಟನ ತಾಲೋಕು ಪ್ರದೇಶವು ಉತ್ತರದಲ್ಲಿ ಅರಸೀಕೆರೆ ತಾಲ್ಲೂಕು ಮತ್ತು ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕು, ಪೂರ್ವದಲ್ಲಿ ತುರುವೇಕೆರೆ ತಾಲ್ಲೂಕುಗಳನ್ನು ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಮತ್ತು ದಕ್ಷಿಣದಲ್ಲಿ ಕೃಷ್ಣರಾಜಪೇಟೆ ತಾಲ್ಲೂಕು, ನೈಋತ್ಯ ಮತ್ತು ಪಶ್ಚಿಮದಲ್ಲಿ ಹೊಳೆನರಸೀಪುರ ಮತ್ತು ಹಾಸನ ತಾಲ್ಲೂಕುಗಳು ಚೆನ್ನರಾಯಪಟ್ಟಣ ತಾಲ್ಲೂಕನ್ನು ಸುತ್ತುವರಿದಿವೆ ಎಂಬುದು ಕಂಡುಬರುತ್ತದೆ. ಇದು ಭೌಗೋಳಿಕ ವಿಸ್ತೀರ್ಣದಲ್ಲಿ 1,042.26 ಚದುರ ಕೀಲೋ ಮೀಟರ್ ಪ್ರದೇಶವನ್ನು ಕೂಡ ಹೊಂದಿದೆ.

ಶ್ರವಣಬೆಳಗೊಳವು ಈ ತಾಲ್ಲೂಕಿನ ಅತ್ಯಂತ ಪ್ರಸಿದ್ದ ಸ್ಥಳೀ ಆಗಿರುತ್ತದೆ. ಇದು ಜೈನರ ಮುಖ್ಯ ಯಾತ್ರಸ್ಥಳವೂ ಕೂಡ ಆಗಿರುತ್ತದೆ. ಚನ್ನರಾಯಪಟ್ಟಣಕ್ಕೆ 13 ಕಿ.ಮೀ. ದೂರದಲ್ಲಿದೆ. ಶಾಸನಗಳಲ್ಲಿ ಇದನ್ನು ವೆಳಗೊಳ, ದೇವರಬೆಳಗೂಳ, ಶ್ವೇತಸರೊವರ, ಧವಳಸರೋವರ, ಗೋಮ್ಮಟಪುರ–ಎಂದು ಮುಂತಾಗಿಯೂ ಕರೆಯಲಾಗಿದೆ. ಜೈನಮುನಿ ಭದ್ರಬಾಹುವೂ ಚಂದ್ರಗುಪ್ತ ಮೌರ್ಯರೂ ಇಲ್ಲಿಗೆ ಬಂದಿದ್ದರೆಂದು ಹೇಳಲಾಗಿದೆ. ಶ್ರವಣಬೆಳಗೊಳ ಊರು ಇಂದ್ರಗಿರಿ ಅಥವಾ ವಿಂದ್ಯಗಿರಿ ಮತ್ತು ಚಂದ್ರಗಿರಿ ಎಂಬ ಎರಡು ಬೆಟ್ಟಗಳನ್ನು ಹೊಂದಿದೆ. 12 ವರ್ಷಗಳಿಗೊಮ್ಮೆ ನಡೆಯುವ ಮಹಾಮಸ್ತಕಾಭಿಷೇಕ ಇಲ್ಲಿನ ವಿಷೇಷ ಸಂಭ್ರಮಾಚರಣೆಯಾಗಿದೆ. ಹಾಗೆಯೇ ಶ್ರವಣಬೆಳಗೊಳದಲ್ಲಿ ಅನೇಕ ಜೈನ ಮಸೀದಿಗಳಿವೆ ಮತ್ತು ಬಹುದೊಡ್ಡದಾದ ಕಳಸವಿದೆ.

ಹೀಗೆ, ಸಾಮಂತ ಮತ್ತು ಸ್ವಾತಂತ್ರವಾಗಿ ಮೈಸೂರು ಮತ್ತು ಕೊಡಗು ಪ್ರದೇಶದಲ್ಲಿ ಆಳ್ವಿಕೆಯನ್ನು ಮಾಡಿರುವಂತಹ ಚಂಗಾಳ್ವ ಅರಸರು ಈ ಮೇಲಿನ ಪ್ರದೇಶಗಳಲ್ಲಿ ಆಳ್ವಿಕೆಯನ್ನು ಮಾಡಿರುತ್ತಾರೆ. ಆದ್ದರಿಂದಲೇ ಅಂದಿನ ಇವರ ಆಡಳಿತದ ಪ್ರದೇಶವು ಇಂದು ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ

ವಿಲೀನವಾಗಿರುತ್ತದೆ. ಆದ್ದರಿಂದಲೇ, ಈ ಎರಡು ಜಿಲ್ಲೆಗಳಲ್ಲಿನ ಪ್ರದೇಶದಲ್ಲಿರುವ ಕೆಲವು ತಾಲೋಕು ಪ್ರದೇಶಗಳ ಭೌಗೋಳಿಕತೆಯನ್ನು ಚರ್ಚಿಸಲಾಗಿರುತ್ತದೆ.

**ಗ್ರಂಥಸೂಚಿ**


1. ಪಿರಿಯಾಪಟ್ಟಣ ತಾಲೂಕು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 2011
2. ಮೈಸೂರು ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, 2011
3. ಮೈಸೂರು ಜಿಲ್ಲೆ ಮಾನವ ಅಭಿವೃದ್ಧಿ ವರದಿ, 2008
4. ಮೈಸೂರು ತಾಲೂಕು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 2011
5. ಎಪಿಗ್ರಾಫಿಯ ಕರ್ನಾಟಕ, ಸಂಪುಟ – 1 ರಿಂದ 10, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
6. ಹಾಸನ ಜಿಲ್ಲೆ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, 1992
7. ಹುಣಸೂರು ತಾಲೂಕು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 2011
8. ಕೃಷ್ಣರಾಜನಗರ 81ರ ವರ್ಷಾಚರಣೆ ಸಂಭ್ರಮ, 2015
9. ಕೃಷ್ಣರಾಜನಗರ ತಾಲೂಕು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 2011
10. ಕೊಡಗು ಜಿಲ್ಲೆ ಗ್ಯಾಸೆಟಿಯರ್, 1992